ಪ್ರಜಾವಾಣಿ
**Monday, July 25th, 2011**



ಜೈನ್ ವಿಶ್ವವಿದ್ಯಾಲಯದ ಸಾಂಸ್ಕೃತಿಕ ವೇದಿಕೆಯು ಬೆಂಗಳೂರಿನಲ್ಲಿ ಭಾನುವಾರ ಏರ್ಪಡಿಸಿದ್ದ ಶ್ವಾನ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದ ಗ್ರೇಟ್ ಡೇನ್ ತಳಿಯ ಶ್ವಾನಗಳು. –ಪ್ರಜಾವಾಣಿ ಚಿತ್ರ

### ಪ್ರಾಣಿ ಪ್ರಿಯರನ್ನು ಮುದಗೊಳಿಸಿದ 'ಡಾಗ್ಸ್ ಡೇ ಔಟ್'

# 'ಶ್ವಾನ ಸಂಹಾರ ಬೇಡ'

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ಅಲ್ಲಿ ಸುಮಾರು 55ಕ್ಕೂ ಹೆಚ್ಚು ತಳಿಯ ಶ್ವಾನಗಳ ಸಂಗಮ ಏರ್ಪಟ್ಟಿತ್ತು. ಇದರ ವೀಕ್ಷಣೆಗೆಂದೇ ಮಕ್ಕಳು, ವಯಸ್ಕರಾದಿಯಾಗಿ ಶ್ವಾನ ಪ್ರೇಮಿಗಳು ಅಧಿಕ ಸಂಖ್ಯೆಯಲ್ಲಿ ಸೇರಿದ್ದರು. ಎತ್ತ ಕಣ್ಣು ಹಾಯಿಸಿದರೂ ಮೆಚ್ಚಿನ ಸಾಕು ಪ್ರಾಣಿಯೊಂದಿಗೆ ಮುದ್ದಾಟದಲ್ಲಿ ತೊಡಗಿದ್ದ ಯುವಕ, ಯುವತಿಯರು. ಜೊತೆಗೆ ಶ್ವಾನ ರಕ್ಷಣೆ ಹಾಗೂ ಅದರ ಪ್ರಾಮುಖ್ಯತೆಯನ್ನು ಸಾರುವ 'ಸೇವ್ ಒನ್- ಪ್ರೊಟೆಕ್ಟ್ ಆಲ್' ಎಂಬ ಘೋಷಣೆ ಅಲ್ಲಿ ನೆರೆದಿದ್ದವರನ್ನೆಲ್ಲಾ ಸೆಳೆಯುತ್ತಿತ್ತು.

ನಗರದ ಜೈನ್ ವಿಶ್ವವಿದ್ಯಾಲಯದ ಸಾಂಸ್ಕೃತಿಕ ವೇದಿಕೆಯು ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಭಾನುವಾರ ಏರ್ಪಡಿಸಿದ್ದ 2011 –12 ನೇ ಸಾಲಿನ 'ಶ್ವಾನ ಪ್ರದರ್ಶನ'ದಲ್ಲಿ ಕಂಡು ಬಂದ ದೃಶ್ಯಗಳು.

ಶ್ವಾನ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ 'ಕರುಣ ಪ್ರಾಣಿ ಕ್ಷೇಮಾಭಿವೃದ್ಧಿ ಸಂಘ'ದ ಅಧ್ಯಕ್ಷ ಡಾ.ಬಿ.ಸಿ. ರಾಮಕೃಷ್ಣ, '1916ರಲ್ಲಿ ಮೊದಲಿಗೆ ಬೆಂಗಳೂರಿನಲ್ಲಿ ಶ್ವಾನ ಪ್ರದರ್ಶನವನ್ನು ಏರ್ಪಡಿಸಲಾಯಿತು. ಅಂದಿನಿಂದ ಇಂದಿನವರೆಗೂ ಶ್ವಾನಗಳ ಬಗ್ಗೆ ವಿಶೇಷ ಕಾಳಜಿ ವಹಿಸಿ, ಪ್ರದರ್ಶನಗಳನ್ನು ಹಮ್ಮಿಕೊಳ್ಳುವುದರ ಮೂಲಕ ಸಮಾಜದಲ್ಲಿ ಪ್ರಜ್ಞೆ ಮತ್ತು ಅರಿವನ್ನು ಮೂಡಿಸುವ ಕಾರ್ಯ ನಡೆದಿದೆ' ಎಂದರು.

'ಇತ್ತೀಚಿನ ವರ್ಷಗಳಲ್ಲಿ ನಗರದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಿದೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ. ಇದಕ್ಕೆ ಪರಿಹಾರವಾಗಿ ಬಿಬಿಎಂಪಿ ಇಡೀ ಬೀದಿನಾಯಿಗಳನ್ನು ಸಾಯಿಸುವ ಕ್ರಮ ಕೈಗೊಳ್ಳಬಾರದು, ಬದಲಾಗಿ ಪರ್ಯಾಯ ಮಾರ್ಗಗಳ ಮೂಲಕ ನಿಯಂತ್ರಿಸಲು ಪ್ರಯತ್ನಿಸಬೇಕು' ಎಂದು ಸಲಹೆ ನೀಡಿದರು.

'ಹಿಂದೆ ನಗರದಲ್ಲಿ ಶ್ವಾನ ಕಡಿತದಿಂದ ರೇಬಿಸ್ ರೋಗಕ್ಕೆ ಹೆಚ್ಚು ಜನ ಬಲಿಯಾಗುತ್ತಿದ್ದರು. ಪಾಲಿಕೆಯು ಇದರ ನಿಯಂತ್ರಣಕ್ಕಾಗಿ ಸಂತಾನ ಹರಣ ಚಿಕಿತ್ಸೆ ಮಾಡುವ ಮೂಲಕ ಮುಂಜಾಗ್ರತಾ ಕ್ರಮ ಕೈಗೊಂಡಿತ್ತು. ಪರಿಣಾಮ ಕಳೆದ ನಾಲ್ಕು ವರ್ಷಗಳಿಂದ ನಗರದಲ್ಲಿ ರೇಬಿಸ್ ರೋಗಕ್ಕೆ ತುತ್ತಾಗುವವರ ಸಂಖ್ಯೆ ಕ್ಷೀಣಿಸಿದೆ' ಎಂದು ಹೇಳಿದರು.

10 ತಿಂಗಳೊಳಗಿನ ಹಾಗೂ ಅದಕ್ಕೂ ಮೇಲ್ಪಟ್ಟಿರುವ ಶ್ವಾನಗಳಿಗೆ ಎರಡು ಪ್ರತ್ಯೇಕ ವಿಭಾಗಗಳಲ್ಲಿ ಪ್ರದರ್ಶನವನ್ನು ನಡೆಸಲಾಯಿತು. ಜರ್ಮನಿ, ಯೂರೋಪ್, ಅಮೆರಿಕ, ರಷ್ಯಾ ಸೇರಿದಂತೆ ಹಲವು ದೇಶಗಳ ವಿವಿಧ ತಳಿಯ ಶ್ವಾನಗಳು ಪ್ರದರ್ಶನದಲ್ಲಿ ಭಾಗವಹಿಸಿದ್ದವು. ಶ್ವಾನಗಳಲ್ಲಿ 'ಉತ್ತಮ ವಿಧೇಯ', 'ಆಕರ್ಷಕ ನೋಟ' ಹಾಗೂ 'ವಿಶೇಷ ವೇಷಭೂಷಿತ'– ಎಂಬ ಮೂರು ಬಗೆಯ ಸ್ಪರ್ಧೆಯನ್ನು ನಡೆಸಲಾಯಿತು. ಎಲ್ಲಾ ವಿಭಾಗದ ಸ್ಪರ್ಧೆಗಳಲ್ಲಿ ಉತ್ತಮ ಪ್ರದರ್ಶನ ತೋರಿದ ಶ್ವಾನಗಳನ್ನು ಪುರಸ್ಕರಿಸಲಾಯಿತು.

ನ್ಯೂಜಿಲೆಂಡ್ ಯುನಿಟೆಕ್‌ನ ಶ್ವಾನ ವರ್ತನೆ ತಜ್ಞ ಅಮೃತ್ ಶ್ರೀಧರ್ ಹಿರಣ್ಯ, ಪಶುವೈದ್ಯಾಧಿಕಾರಿ ಡಾ. ಚಂದ್ರಯ್ಯ ಇತರರು ಭಾಗವಹಿಸಿದ್ದರು.